ಹೊಸತು

## ಹೊಸ ಉಷಾ ಹಂಟರ್ ಫ್ಯಾನ್

ಉಷಾ ಹಂಟರ್ ಅಮೆರಿಕನ್ ಫ್ಯಾನ್ ಹೊಸದಾಗಿ ಮಾರುಕಟ್ಟೆಗೆ ಬಂದಿದೆ. ಹಂಟರ್ ಎಂದರೆ ಸ್ಟೈಲ್. ಗುಣಮಟ್ಟದಲ್ಲಿ ಉತ್ತಮವಾಗಿದ್ದು, ದೀರ್ಘ ಬಾಳಿಕೆ ಬರುತ್ತದೆ. ವೈವಿಧ್ಯಮಯ ಶ್ರೇಣಿಯಲ್ಲಿದ್ದು, ಮನೆಗೆ ಅದ್ಭುತ ನೋಟ ಒದಗಿಸಬಲ್ಲದು ಎನ್ನುತ್ತದೆ ಕಂಪೆನಿ.

ಹಿಂದು ಮುಂದು ಮಾಡಬಲ್ಲ ಪ್ಲೈವುಡ್ ಬ್ಲೇಡ್‌ಗಳಿದ್ದು, ಈ ಬ್ಲೇಡ್‌ಗಳು ಗಾಢ ಮರದ ಬಣ್ಣ, ಮ್ಯಾಪಲ್, ಗ್ರಾಫೈಟ್, ಬಿಳಿ, ಬೀಜ್, ಚೆರ್ರಿ, ರೋಸ್‌ವುಡ್, ಓಕ್ ಮತ್ತು ವಾಲ್‌ನಟ್ ಬಣ್ಣಗಳಲ್ಲಿ ಲಭ್ಯ.

ನಿಖರವಾದ ಗ್ರೌಂಡ್ ಬಾಲ್ ಬೇರಿಂಗ್, ವೇಗದ ನಿಯಂತ್ರಣಕ್ಕೆ ಪೇಟೆಂಟ್ ಇರುವ ಸೌಂಡ್ ಡ್ಯಾಂಪನರ್ ಅಳವಡಿಸಲಾಗಿದೆ. ಗೀಚು ಬೀಳದ ಬ್ಲೇಡ್‌ಗಳು, ಮತ್ತು ಇಲ್ಲಿನ ಪರಿಸರಕ್ಕೆ ಸೂಕ್ತವಾಗುವ ಹಾಗೆ ಬಲಿಷ್ಠವಾದ ಮೋಟಾರ್ ಅಳವಡಿಸಲಾಗಿದೆ.

ಒಂಭತ್ತು ಮಾದರಿಗಳಲ್ಲಿ ಲಭ್ಯವಿದ್ದು, ಬೆಲೆ ₹ 11,599.






## ಎಲ್‌ಜಿ ಆಪ್ಟಿಮಸ್ ಜಿ ಫೋನ್

ಎಲೆಕ್ಟ್ರಾನಿಕ್ ಮತ್ತು ಮೊಬೈಲ್ ಉದ್ಯಮಕ್ಕೆ ಹೆಸರಾದ ಎಲ್‌ಜಿ ಇದೀಗ ಆಪ್ಟಿಮಸ್ ಜಿ ಸ್ಮಾರ್ಟ್‌ಫೋನ್ ಒಂದನ್ನು ಮಾರುಕಟ್ಟೆಗೆ ಹೊಸದಾಗಿ ಬಿಡುಗಡೆ ಮಾಡಿದೆ. ಅತ್ಯಾಧುನಿಕ ತಂತ್ರಜ್ಞಾನದಿಂದ ತಯಾರಿಸಲಾದ ಈ ಫೋನ್‌ನಲ್ಲಿ ಹಲವು ವಿಶೇಷಗಳಿವೆ. ಬಳಸಲು ಸುಲಭವಾಗಿದ್ದು, 4.7 ಇಂಚುಗಳ ಸ್ಕ್ರೀನ್ ಇದ್ದು ನೋಡಲು ಕೂಡ ಆಕರ್ಷಕವಾಗಿದೆ.

ಬೆಲೆ ₹ 34,000. ಎಲ್ಲ ಮೊಬೈಲ್ ಮಳಿಗೆಗಳಲ್ಲಿ ಸಿಗುತ್ತದೆ.
ಮಾಹಿತಿಗೆ: 080 42612254



## ರಿಬಾಕ್‌ನಿಂದ ರಿಯಲ್‌ಫ್ಲೆಕ್ಸ್ ಟ್ರಾನ್ಸಿಷನ್

ರಿಬಾಕ್ ಕಂಪೆನಿ ರಿಯಲ್‌ಫ್ಲೆಕ್ಸ್ ಟ್ರಾನ್ಸಿಷನ್ ಎಂಬ ಹೊಸ ತಂತ್ರಜ್ಞಾನದಿಂದ ತಯಾರಿಸಿದ ಶೂ ಒಂದನ್ನು ಮಾರುಕಟ್ಟೆಗೆ ತಂದಿದೆ. ಇದರ ತಳಭಾಗದಲ್ಲಿರುವ ಸ್ಪ್ರಿಂಗ್‌ನಿಂದಾಗಿ ಪಾದವನ್ನು ಸುಲಲಿತವಾಗಿ ಬಾಗಿಸಬಹುದು. ಇದರಲ್ಲಿ 53 ಸ್ವತಂತ್ರ ಸೆನ್ಸರ್‌ಗಳಿದ್ದು, ಪಾದಗಳಿಗೆ ಆರಾಮದಾಯಕವಾಗಿದೆ ಎನ್ನುತ್ತದೆ ಕಂಪೆನಿ. ಬೆಲೆ ₹ 5,999. ಎಲ್ಲ ರಿಬಾಕ್ ಮಳಿಗೆಗಳಲ್ಲಿ ಲಭ್ಯ.




## ಮಹಿಳಾ ದಿನಾಚರಣೆ ನೆಪದಲ್ಲಿ ವಾಚ್

ಸ್ವಿಸ್ ವಾಚ್ ಕಂಪೆನಿ ಈಥೋಸ್ ಮಹಿಳಾ ದಿನಾಚರಣೆಯ ನೆಪದಲ್ಲಿ ಹೊಸ ಬಗೆಯ ವಾಚುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ತಾಯಿ, ಮಗಳು, ಗೆಳತಿ, ಸೊಸೆ, ಪತ್ನಿ ಹೀಗೆ ವಿವಿಧ ಪಾತ್ರ ವಹಿಸುವ ಮಹಿಳೆಗೆ ಈ ಸ್ಪೆಷಲ್ ವಾಚ್‌ಗಳು ಸೂಕ್ತವಾಗುತ್ತವೆ. ಅದಕ್ಕಾಗಿಯೇ ವಿಶೇಷವಾಗಿ ವಿನ್ಯಾಸ ಮಾಡಲಾಗಿದೆ ಎನ್ನುತ್ತದೆ ಕಂಪೆನಿ. ಬೆಲೆ ₹ 57,800.

ವಿವರಗಳಿಗೆ: www.ethoswatches.com